**ಎಂ.ವಿ.ಸಿ.ನಂ.881/2023** **ಪಿ.ಡಬ್ಲೂಃ 1**

ದಿನಾಂಕಃ 19/06/2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

<u>ಪಾಟೀ ಸವಾಲುಃ 2 ನೇ ಎದುರುದಾರರ ಪರವಾಗಿ ಶ್ರೀ ಸಿ ಎಂ ಸಿ ವಕೀಲರಿಂದಃ</u>

1. ಅಪಘಾತದಿಂದಾಗಿ ನನಗೆ ಗಾಯ ಆಗಿರುತ್ತದೆ. ಅಪಘಾತವು ನನಗೆ ಟ್ರಾಕ್ಟರಿನಿಂದ ಆಗಿರುತ್ತದೆ. ಅಪಘಾತದ ಸಮಯದಲ್ಲಿ ನಾನು ಭತ್ತದ ಹುಲ್ಲಿನ ಕೆಲಸವನ್ನು ಕಣದಲ್ಲಿ ಮಾಡುತಿದ್ದೆ. ಶೆಣವಿನಕುಪ್ಪೆ ಸುರೇಶರವರಿಗೆ ಸೇರಿದ ಟ್ರಾಕ್ಟರಿನಿಂದ ಅಪಘಾತ ಆಗಿರುತ್ತದೆ. ಸದರಿ ಟ್ರಾಕ್ಟರನ್ನು ಉಮೇಶ್ ಚಲಾಯಿಸುತಿದ್ದರು. ಹೊನ್ನವಳ್ಳಿಯಲ್ಲಿ ನಾನು ಕೆಲಸ ಮಾಡುತಿದ್ದೆ. ಹೊನ್ನವಳ್ಳಿಯ ದೇವರಾಜು ರವರಿಗೆ ಸೇರಿದ ಕೆಲಸ ಮಾಡುತಿದ್ದೆ. ಸದರಿ ಭತ್ತದ ಕಣವು 60 ಅಡಿ ಅಗಲ ಇತ್ತು. ನಾನು ಜೋಳ ಬಿಡುಸುವ ಯಂತ್ರ ಹಾಗೂ ಭತ್ತ ಬಡಿಯುವ ಯಂತ್ರಗಳನ್ನು ನಾನು ನೋಡಿಲ್ಲ. ಸುರೇಶರವರ ಬಳಿ ಭತ್ತ ಬಡಿಯುವ ಯಂತ್ರ ಇಲ್ಲ. ಅಪಘಾತದ ಸಮಯದಲ್ಲಿ 7-8 ಜನ ಇದ್ದೆವು. ನನಗೆ ಪರಿಚಯ ಇದ್ದವರು ಟ್ರಾಕ್ಟರಿನ ಚಾಲಕರು. ಅಪಘಾತದ ಸಮಯದಲ್ಲಿ ಹೊನ್ನವಳ್ಳಿಯ ದೇವರಾಜು ಇರಲಿಲ್ಲ. ಅಲ್ಲಿ ಕೆಲಸ ಮಾಡುತಿದ್ದವರೆಲ್ಲ 20 ಮೀಟರ್ ದೂರದಲ್ಲಿ ಇದ್ದರು. ಟ್ರಾಕ್ಟರಿನ ಚಾಲಕ ನನ್ನನ್ನು ಆಸ್ಪತ್ರೆಗೆ ಆಟೋ ರಿಕ್ಷಾದಲ್ಲಿ ಕರೆದುಕೊಂಡು ಬಂದಿರುತ್ತಾರೆ. ಅಪಘಾತದ ವಿಷಯವನ್ನು ನಮ್ಮ ಮನೆಯವರಿಗೆ ನಾನೇ ತಿಳಿಸಿರುತ್ತೇನೆ. ದೂರನ್ನು ಪೊಲೀಸರಿಗೆ ನನ್ನ ಹೆಂಡತಿ ನೀಡಿರುತ್ತಾರೆ. ಮೊದಲಿಗೆ ಅರಕಲಗೂಡಿನ ಆಸ್ಪತ್ರೆಗೆ ಬಂದೆವು. ಅಪಘಾತವು ಯಾವ ರೀತಿ ಆಗಿರುತ್ತದೆ ಎಂದು ಅರಕಲಗೂಡಿನ ಆಸ್ಪತ್ರೆಯಲ್ಲಿ ವೈದ್ಯರಿಗೆ ತಿಳಿಸಿರುತ್ತೇನೆ. ಹಾಸನದ ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯರಿಗೆ ಯಾವ ರೀತಿ ಅಪಘಾತ ಆಯಿತು ಎಂದು ತಿಳಿಸಿರುತ್ತೇನೆ. ವೈದ್ಯರು ನಾನು ಹೇಳಿದ ಹೇಳಿಕೆಯನ್ನು ಬರೆದುಕೊಂಡಿರುತ್ತಾರೆ. ಹಾಸನದ ಸರ್ಕಾರಿ ಆಸ್ಪತ್ರೆಯಿಂದ ಬೆಂಗಳೂರಿನ ಸಂಜಯಗಾಂಧಿ ಆಸ್ಪತ್ರೆಗೆ ಚಿಕಿತ್ಸೆಗೆ ಹೋಗಿರುತ್ತೇವೆ. ಸಂಜಯಗಾಂಧಿ ಆಸ್ಪತ್ರೆಯಲ್ಲಿ ಅಪಘಾತ ಯಾವ ರೀತಿ ಆಯಿತು ಎಂಬುದನ್ನು ಹೇಳಿದ್ದು ವೈದ್ಯರು ಬರೆದುಕೊಂಡಿದ್ದಾರೆ. ಈ ಘಟನೆಗೆ ಸಂಬಂಧಿಸಿದಂತೆ ಪೊಲೀಸರು ನನ್ನ ಹೇಳಿಕೆ ಬರೆದುಕೊಂಡಿರುತ್ತಾರೆ. ಆಸ್ಪತ್ರೆಯಿಂದ ಬಂದ ನಂತರ ಪೊಲೀಸರು ನನ್ನನ್ನು ವಿಚಾರಣೆ ಮಾಡಿರುತ್ತಾರೆ. ಪೊಲೀಸರು ದಾಖಲಿಸಿರುವ ಅಂತಿಮ ವರದಿಯ ಬಗ್ಗೆ ತಿಳಿದುಕೊಂಡಿರುತ್ತೇನೆ.

**ಎಂ.ವಿ.ಸಿ.ನಂ.881/2023** **ಪಿ.ಡಬ್ಲೂ: 1**

2. ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ಪೊಲೀಸರು ದಾಖಲಿಸಿರುವ ದೋಷಾರೋಪಣಾ ಪಟ್ಟಿಯಲ್ಲಿ ಭತ್ತದ ಸೆಲ್ಲಿಂಗ್ ಮಿಷಿನಿಗೆ ಹುಲ್ಲನ್ನು ಕೊಡುವಾಗ ಅಪಘಾತ ಸಂಭವಿಸಿದೆ ಎಂದು ಬರೆಯಲಾಗಿದೆ ಎಂದರೆ ಸರಿ. ಆದರೆ ಅದು ಸುಳ್ಳು ಎಂದು ನುಡಿಯುತ್ತಾರೆ. ಪೊಲೀಸರು ದೋಷಾರೋಪಣಾ ಪಟ್ಟಿಯಲ್ಲಿ ಭತ್ತದ ಹುಲ್ಲನ್ನು ಸೆಲ್ಲಿಂಗ್ ಮಿಷಿನಿಗೆ ಕಾಲಿನಿಂದ ದೂಕುತಿದ್ದಾಗ ಅಪಘಾತ ಸಂಭವಿಸಿರುತ್ತದೆ ಎಂದು ಬರೆದಿರುತ್ತಾರೆ ಎಂದರೆ ಸರಿ. ಆದರೆ ಅದು ಸುಳ್ಳು ಎಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಟ್ರಾಕ್ಟರಿನಿಂದ ಅಪಘಾತ ಸಂಭವಿಸಿರುವುದು ಸುಳ್ಳು ಎಂದರೆ ಸರಿಯಲ್ಲ. ಸುರೇಶ್ ರವರಿಗೆ ಸೇರಿದ ಟ್ರಾಕ್ಟರಿನಲ್ಲಿ ಯಾವುದೇ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಭತ್ತದ ಸೆಲ್ಲಿಂಗ್ ಮಿಷಿನನ್ನು ಟ್ರಾಕ್ಟರಿಗೆ ಜೋಡಿಸಿಕೊಂಡು ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಾಗಿಸಬೇಕು ಎಂದರೆ ಸರಿ. ಸೆಲ್ಲಿಂಗ್ ಮಿಷಿನನ್ನು ಟ್ರಾಕ್ಟರಿನಿಂದ ತೆಗೆದುಕೊಂಡು ಹೋಗಲಾಗಿತ್ತು ಎಂದರೆ ಸರಿಯಲ್ಲ. ಭತ್ತದ ಸೆಲ್ಲಿಂಗ್ ಮಿಷಿನಿಗೆ ಹುಲ್ಲನ್ನು ಹಾಕಿದರೆ ಹುಲ್ಲು ಹಾಗೂ ಭತ್ತ ಬೇರ್ಪಟ್ಟು ಹೊರ ಬರುತ್ತವೆ ಎಂದರೆ ಸರಿ. ಭತ್ತದ ಸೆಲ್ಲಿಂಗ್ ಮಿಷಿನಿಗೆ ಹುಲ್ಲನ್ನು ಹಾಕುವ ಸಮಯದಲ್ಲಿ ಅಪಘಾತ ಆಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿದಾರರು ಮುಂದುವರೆದು ಟ್ರಾಕ್ಟರಿನಿಂದ ಅಪಘಾತ ಆಗಿರುವುದಾಗಿ ನುಡಿಯುತ್ತಾರೆ. ಸೆಲ್ಲಿಂಗ್ ಮಿಷಿನಿಗೆ ಹುಲ್ಲನ್ನು ಹಾಕುವ ಸಮಯದಲ್ಲಿ ಅಪಘಾತ ಆಗಿದ್ದರೂ ಸಹ ಟ್ರಾಕ್ಟರಿನಿಂದ ಅಪಘಾತ ಆಗಿದೆ ಎಂದು ಸುಳ್ಳು ಪ್ರಕರಣ ಮಾಡಿ ಸುಳ್ಳು ಸಾಕ್ಷಿ ಹೇಳುತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇದೆ.

(ನಾಗೇಶ ಮೂರ್ತಿ ಬಿ.ಕೆ.)
ಸೀನಿಯರ್ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅರಕಲಗೂಡು.